# ನೀವು ಕೇಳಿದಿರಿ?

ಕೆ.ವಿ.ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಅಂದು ಮಕ್ಕಳು ಊಟ ಮಾಡುವಾಗ ಚಂದಮಾಮನನ್ನು ತೋರಿಸುತ್ತಿದ್ದರು, ಈಗ ಮೊಬೈಲ್ ತೋರಿಸುವರಲ್ಲಾ...?*



ಬಯಲುಸೀಮೆ ಜನಕ್ಕಿಂತ ಮೊಬೈಲ್‌ಸೀಮೆ ಜನರೇ ಹೆಚ್ಚಾಗಿರುವುದರಿಂದ!

ವಿ.ಹಮೀದ್, ವಿಟ್ಲ

*ಪೌರೋಹಿತ್ಯ ಕಾರ್ಯವನ್ನು ಹೆಣ್ಣು ಮಾಡದಿರಲು ಕಾರಣವೇನು?*

ಹೋಮಕುಂಡದ ಬಿಸಿಗೆ ಮೇಕಪ್ ಹಾಳಾಗುವುದರಿಂದ!

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

*ಮಹಾಪುರುಷರ ಜಯಂತಿ ಆಚರಿಸುವುದು ಸರ್ಕಾರದ ಕೆಲಸವೆ?*

ಎಲ್ಲಾನೂ ಮಾಡುವುದು ಓಟಿಗಾಗಿ, ಕಂತೆ ನೋಟಿಗಾಗಿ, ಮಹಾಪುರುಷರನು ನೆನೆಯುವುದು ಕುರ್ಚಿಗಾಗಿ!

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ

*ಕೆಲವರು ವೃತ್ತಿಯಲ್ಲಿದ್ದರೂ ನಿವೃತ್ತರಂತೆ ಇರಲು ಕಾರಣವೇನಿರಬಹುದು?*



ಬಸವನಹುಳುವೇ ಹಾಗೆ ಅದು ನಡೆಯುತ್ತಿರುತ್ತದೆ, ಆದರೂ ಇದ್ದಲ್ಲಿಯೇ ಇರುತ್ತದೆ!

ಗೀತಾ ಬರ್ಲ, ಬೆಂಗಳೂರು

*ಸಾರವಿಲ್ಲದ ಸಂಸಾರಕ್ಕೂ, ಸತ್ವವಿಲ್ಲದ ಸನ್ಯಾಸತ್ವಕ್ಕೂ ಏನು ವ್ಯತ್ಯಾಸ?*

ಅಲ್ಲಿ ರಗಳೆ ಹೆಚ್ಚು, ಇಲ್ಲಿ ಬೊಗಳೆ ಹೆಚ್ಚು!

ಸವಿರವಿ, ಬಾಳೆಹೊನ್ನೂರು

*ದೇವರಿಗೆ ಏಕೆ ಮೂರು ಸಲಾನೇ ಪ್ರದಕ್ಷಿಣೆ ಮಾಡಬೇಕು, ಮೂರು ಸಲಾನೇ ನಮಸ್ಕಾರ ಮಾಡಬೇಕು?*

ಪಾಪಕ್ಕೊಂದು, ಪ್ರಾಯಶ್ಚಿತ್ತಕ್ಕೊಂದು, ಪುಣ್ಯಕ್ಕೊಂದು!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಈ ಭೂಮಿ ಮೇಲೆ ಮೊದಲು ಜನಿಸಿದ್ದು ಗಂಡೋ, ಹೆಣ್ಣೋ?*

ಎರಡೂ ಅಲ್ಲ. ಸ್ವ–ಸಂತಾನೋತ್ಪತ್ತಿ ಮಾಡುವ ಅಮೀಬಾ!

ಪ್ರಶಾಂತ ಮ. ಹೊಸಮನಿ, ನಾಗಠಾಣ

*ಜೀವಂತವಿರುವಾಗ ಬೆಳಕಿಗೆ ಬರದ ಹೆಸರು ಮರಣ ಹೊಂದಿದಾಗ ಪ್ರಚಲಿತಗೊಳ್ಳುವುದೇಕೆ?*

ಮನೆಯವರೇ ಆಸ್ಥೆಯಿಂದ ಚಿರಸ್ಮರಣೆ ಕಾಲಂನಲ್ಲಿ ಹಾಕಿಸುವುದರಿಂದ!

ಎಸ್.ಜಿ. ರಾಜಶೇಖರರೆಡ್ಡಿ, ಸಿರಿಕೊಳಂ

*ಸಚಿನ್ ತೆಂಡುಲ್ಕರ್ ರಾಜ್ಯಸಭೆ ಸದಸ್ಯರಾಗಿ ಏನು ಮಾಡಲಿದ್ದಾರೆ ರಾಮ್‌ಗಾರು?*

ಹೆಚ್ಚೆಂದರೆ ಸಭಾತ್ಯಾಗ ಮಾಡುತ್ತೇನೆ ಎನ್ನುವ ಬದಲು ರನ್ ಔಟ್ ಆಗುತ್ತೇನೆ ಎನ್ನಬಹುದಷ್ಟೆ ರೆಡ್ಡಿಗಾರು!

ಎಚ್. ಸಿದ್ದಾರ್ಥ ಹೆಬ್ಬಾರ, ಈದು

*ಯೋಧ, ಸಾಹಿತಿ, ಶಿಕ್ಷಕ, ಈ ಮೂವರಲ್ಲಿ ಹೆಚ್ಚು ಮಂದಿ ಗೌರವಿಸುವ ವ್ಯಕ್ತಿ ಯಾರು?*

ಯೋಧನಿಗೆ ಗೌರವವಿದೆ, ಹಣವಿಲ್ಲ; ಶಿಕ್ಷಕನಿಗೆ ಸಂಬಳವಿದೆ, ಗೌರವವಿಲ್ಲ; ಸಾಹಿತಿಗೆ ಸಂಬಳವೂ ಇಲ್ಲ, ಗೌರವವೂ ಇಲ್ಲ!

ಮಂಜು, ಹಗರಿಬೊಮ್ಮನಹಳ್ಳಿ

*ಯೋಗಿ ಮತ್ತು ಸನ್ಯಾಸಿಗೆ ವ್ಯತ್ಯಾಸವಿದೆಯೆ?*

ಯೋಗಿ ಯೋಗಿಯಷ್ಟೆ; ಸನ್ಯಾಸಿಗಳಲ್ಲಿ ಎರಡು ವಿಧ – ಸನ್ಯಾಸಿ, ಮಾರ್ಜಾಲ ಸನ್ಯಾಸಿ!

ಹೆಸರಿಲ್ಲ, ವಾರಂಗಲ್

*ಗಂಡ ಹೆಂಡತಿ ಜೊತೆಯಲ್ಲಿದ್ದರೆ ಸಮರಸ ಎನ್ನುತ್ತಾರೆ, ಬೇರೆಯಾದಾಗ ಏನಂತ ಕರೆಯಬೇಕು?*

ಡೈವೋರಸ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಹೊನ್ನಿಗೆ ಬೆಲೆಯುಂಟು, ಮಣ್ಣಿಗೆ ಬೆಲೆಯುಂಟು. ಆದರೆ ಹೆಣ್ಣಿಗೆ ಬೆಲೆ ಕಟ್ಟಲಾಗದು. ಏಕೆ?*

ಜಡಕ್ಕೆ ಬೆಲೆಯುಂಟು; ಚೇತನ ಅನರ್ಘ್ಯ, ಅನೂಹ್ಯ!

## ಬಹುಮಾನಿತ ಪ್ರಶ್ನೆ

ಚೈತ್ರಾ ಕುಕ್ಕೆಮನೆ, ಬೆಂಗಳೂರು

*ಐಶ್ವರ್ಯ ರೈ ದಪ್ಪ ಆಗಿದ್ದಾಳಂತೆ, ಎಲ್ಲಾ ಅಭಿಮಾನಿಗಳಿಗೂ ಬೇಸರವಾಗಿದೆ. ನಿಮ್ಮ ಅಭಿಪ್ರಾಯವೇನು ಸರ್?*

ಆಗಲಿ ಬಿಡಿ, ನಾನೇನೂ ಆಕೆಯನ್ನು ಬೆನ್ನಮೇಲೆ ಹೊತ್ತು ಕೂಸುಮರಿ ಮಾಡಬೇಕಿಲ್ಲ!

ವಿ. ಹೇಮಂತಕುಮಾರ್, ಬೆಂಗಳೂರು

*ರಾಷ್ಟ್ರಪತಿ ರಬ್ಬರ್ ಸ್ಟ್ಯಾಂಪ್ ಆದರೆ ರಾಜ್ಯಪಾಲರು?*

ಹೈಕಮಾಂಡ್ ರಾಜ್ಯಸರ್ಕಾರಗಳೆಂಬ ಸಿಸ್ಟಂಗಳಿಗೆ ಸಿಕ್ಕಿಸುವ ಪೆನ್ ಡ್ರೈವ್!

ಆರ್. ಮಧುಸೂದನ್, ಹಾಸನ

*ಹುಲಿಯನ್ನೇ ಪಳಗಿಸುವ ಗಂಡು ಹೆಣ್ಣಿನ ಮುಂದೆ ಇಲಿಯಂತೆ ನಾಟಕ ಆಡುತ್ತಾನಲ್ಲಾ, ಏಕೆ?*

'ಒಂದು ಹುಲಿ, ಒಂದು ಇಲಿ, ಪಕ್ಕದ ಮನೆ ಫ್ಯಾಮಿಲಿ' ಎನ್ನುತ್ತಾರೆ ಕವಿ ಡುಂಡಿರಾಜ್. ಇಲಿ ಫ್ಯಾಮಿಲಿಗೆ ಅವಶ್ಯ!

ಮುರಲೀಧರ ಕುಲಕರ್ಣಿ, ಬೀದರ್

*ಜೈಲಿನಿಂದ ಹೊರಬಂದವರು, ಪೊಲೀಸರಿಂದ ಒದೆ ತಿಂದವರು ಎಲ್ಲರೂ v ಚಿಹ್ನೆಯನ್ನೇ ತೋರಿಸುವುದರ ಮರ್ಮವೇನು?*



v ಫಾರ್ ವಕ್ರಪುಚ್ಛ! ಜನ್ಮದಲ್ಲಿ ಸರಿಹೋಗುವುದಿಲ್ಲ ಎಂಬುದರ ಸಂಕೇತವದು!

ಸಿ.ಸ್ವಾಮಿ ಗುಂಡೇಗಾಲ, ಮದ್ದೂರು

*ಪ್ರೀತಿಗೂ, ಪ್ರೇಮಕ್ಕೂ ವ್ಯತ್ಯಾಸ ಏನ್ರೀ?*

ಪ್ರೀತಿಗೆ ಪ್ರೀತಿಗಳ ದಿನ ಎಂಬುದಿಲ್ಲ!

ಪಟ್ಟೆಸೋಮನಹಳ್ಳಿ ಗಾನಾಸುಮಾ, ಪಾಂಡವಪುರ

*ಮದುವೆಯಾದ ಹೆಂಡತಿಯರಲ್ಲೇಕೆ ಹೆಣ್ತನ ಪಲಾಯನ ಮಾಡಿಬಿಡುತ್ತೆ?*

ತಾಯ್ತನ ಕಾಲಿರಿಸುವುದರಿಂದ!

■ ರಾಮ್